ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಇಲ್ಲಾ

ಆ) ಇಲ್ಲಾ

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ.

ಪ್ರವಾಸೋದ್ಯಮ ಬೆಳವಣಿಗೆಗೆ ವಿಮಾನ ನಿಲ್ದಾಣದ ಅವಶ್ಯಕತೆ

2023 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೋಳಗುಮ್ಮಟ, ಐಹೊಳೆ, ಪಟ್ಟದಕಲ್ಲು, ಬಾದಾಮಿ, ಮೊದಲಾದ ಖ್ಯಾತ ಐತಿಹಾಸಿಕ ಸ್ಥಳಗಳನ್ನು ಹೊಂದಿರುವ ಬಿಜಾಪುರ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಬೆಳವಣಿಗೆಗೆ ವಿಮಾನ ನಿಲ್ದಾಣ ಅವಶ್ಯವೆಂದು ಸರ್ಕಾರ ಮನಗಂಡಿದೆಯೇ? ಹಾಗಿದ್ದಲ್ಲಿ ವಿಮಾನ ನಿಲ್ದಾಣ ಸ್ಥಾಪನೆಯ ದಿಶೆಯಲ್ಲಿ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ?

ಆ) ಕೃಷ್ಣ ಮೇಲ್ದಂಡೆಯೋಜನೆ ಪೂರ್ಣಗೊಳ್ಳುವ ಹಂತ ತಲುಪಿದ್ದು, ರಾಜ್ಯದ ಅತಿದೊಡ್ಡ ವಿವಿಧೋದ್ದೇಶ ನೀರಾವರಿ ಆಣೆಕಟ್ಟು ನಿರ್ಮಾಣದ ಜೊತೆಗೆ ಆ ಪ್ರದೇಶವನ್ನು ಪ್ರವಾಸಿ ಆಕರ್ಷಣೆ ತಾಣವನ್ನಾಗಿ ಪರಿವರ್ತಿಸಲು ಸರ್ಕಾರ ಚಿಂತನೆ ನಡೆದಿದೆಯೇ? ನಡೆಸಿದ್ದರೆ ಯೋಜನೆಯ ನೀಲಿ ನಕ್ಷೆ ವಿವರ ನೀಡುವುದು?

ಇ) ಬಿಜಾಪುರ ಜಿಲ್ಲೆ, ಕೇವಲ ಐತಿಹಾಸಿಕ ಕಟ್ಟಡಗಳು ಮಾತ್ರ ವಿಖ್ಯಾತವಾಗಿಲ್ಲದೇ ಈ ಜಿಲ್ಲೆಯ ಜಾನಪದ, ಸಾಹಿತ್ಯ ಸಂಗೀತ ನೃತ್ಯ, ಕಲೆ ವಿಖ್ಯಾತವಾಗಿದ್ದು ಅದನ್ನು ಪ್ರವಾಸೋದ್ಯಮ ಬೆಳವಣಿಗೆಗೆ ಬಳಸಿಕೊಳ್ಳಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) ಹೌದು, ಆದರೆ, ವಿಮಾನ ನಿಲ್ದಾಣ ಸ್ಥಾಪನೆಯ ಕಾರ್ಯವು ಪ್ರವಾಸೋದ್ಯಮ ಇಲಾಖೆಯ ಅಡಿಯಲ್ಲಿ ಬರುವುದಿಲ್ಲ.

ಆ) ಹೊಸ ಪ್ರವಾಸೋದ್ಯಮ ನೀತಿಯಲ್ಲಿ ಆಲಮಟ್ಟಿಯನ್ನು 'ಸಿ' ಗುಂಪಿನಲ್ಲಿ ಸೇರಿಸಲಾಗಿದೆ.

ಇ) ಪ್ರವಾಸೋದ್ಯಮ ಇಲಾಖೆಯು ಪ್ರತೀ ವರ್ಷ ಜಿಲ್ಲಾ ಆಡಳಿತದ ಸಹಕಾರದೊಡನೆ ಬಿಜಾಪುರದಲ್ಲಿ ನವರಸಪುರ ಉತ್ಸವ ಹಾಗೂ ಪಟ್ಟದಕಲ್ಲಿನಲ್ಲಿ ಪಟ್ಟದಕಲ್ಲು ಉತ್ಸವವನ್ನು ಆಚರಿಸುವ ಮೂಲಕ ನೃತ್ಯ ಕಲೆ ಸಂಸ್ಕೃತಿ ಜಾನಪದ ಕಲೆಯನ್ನು ಪ್ರವಾಸೋದ್ಯಮ ಬೆಳವಣಿಗೆಗೆ ಬಳಸಿಕೊಳ್ಳಲಾಗುತ್ತಿದೆ.

ಬೆಂಗಳೂರು ನಗರದಲ್ಲಿ ಕೆ.ಎಂ.ಎಫ್ .ಹಾಲಿನ ಬೂತುಗಳು

2024 - ಶ್ರೀ ಎನ್. ರಾಜಣ್ಣ (ಭಾರತೀನಗರ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಕೆ.ಎಂ.ಎಫ್. ಹಾಲಿನ ಬೂತುಗಳು (ಯಂತ್ರಚಾಲಿತ) ಎಷ್ಟಿವೆ?

ಆ) ಆ ಬೂತುಗಳಿಂದ ಪ್ರತಿ ದಿನ ಹಾಲು ಮಾರಾಟ ಮಾಡಲಾಗುತ್ತಿದೆಯೇ?

ಇ) ಹೆಚ್ಚಿನ ಬೂತುಗಳಲ್ಲಿ ಲೀಟರ್ ಅಳತೆಯ ಮೂಲಕ ಹಾಲನ್ನು ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ಯಂತ್ರಗಳನ್ನು ದುರಸ್ಥಿ ಮಾಡಲು ಯಾವ ಕ್ರಮ ತೆಗೆದುಕೊಳ್ಳಲಾಗಿದೆ?

ಉ) ಈ ಬೂತುಗಳಲ್ಲಿ ಪ್ಯಾಕೆಟ್ ಹಾಲನ್ನು ಸರಬರಾಜು ಮಾಡಲು ಪ್ರಸ್ತಾವನೆ ಇದೆಯೇ?

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಕೆ.ಎಂ.ಎಫ್.ನ ಮಾತೃ ಡೈರಿಯ ವ್ಯಾಪ್ತಿಯಲ್ಲಿ ಬೆಂಗಳೂರು ನಗರದಲ್ಲಿ ಪ್ರಸ್ತುತ 144 ಹಾಲಿನ ಬೂತುಗಳಿವೆ.

ಆ) ಹೌದು.

ಇ) ಹೌದು, ವಿದ್ಯುಚ್ಛಕ್ತಿ ಅಭಾವ ಅಥವಾ ಕಡಿತದಿಂದ ಹಾಗೂ ಕೆಲವೊಮ್ಮೆ ಯಂತ್ರಗಳು ದುರಸ್ಥಿಗೆ ಬಂದಂತಹ ಅನಿವಾರ್ಯ ಸಂದರ್ಭಗಳಲ್ಲಿ ಲೀಟರ್ ಅಳತೆ ಮೂಲಕ ಹಾಲನ್ನು ಮಾರಾಟ ಮಾಡಲಾಗುತ್ತಿದೆ.

ಈ) ಸ್ವಯಂಚಾಲಿತ ಯಂತ್ರಗಳ ದುರಸ್ಥಿಗಾಗಿ ನುರಿತ ತಾಂತ್ರಿಕ ಸಿಬ್ಬಂದಿ ಅಧಿಕಾರಿಗಳ ತಂಡವನ್ನು ರಚಿಸಿ ಈ ಕೆಲಸವನ್ನು ನಿರ್ವಹಿಸಲಾಗುತ್ತಿದೆ.

ಉ) ಸದ್ಯಕ್ಕೆ ಪ್ರಸ್ತಾವನೆಯಿರುವುದಿಲ್ಲ.

ಲೋಕೋಪಯೋಗಿ ಇಲಾಖೆಯ ಗ್ಯಾಂಗ್‌ಮೆನ್‌ಗಳ ನೇಮಕಾತಿ

2026 - ಶ್ರೀ ಎ. ರುಕ್ಮಯ ಪೂಜಾರಿ (ವಿಟ್ಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲೋಕೋಪಯೋಗಿ ಇಲಾಖೆಯ ರಸ್ತೆಗಳ ದುರಸ್ತಿಗಾಗಿ ಗ್ಯಾಂಗ್‌ಮೆನ್‌ಗಳಿಲ್ಲದೇ ಇರುವುದರಿಂದ ರಸ್ತೆಗಳು ಹಾಳಾಗಿರಲು ಮುಖ್ಯ ಕಾರಣ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?